ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2192
2. ಸದಸ್ಯರ ಹೆಸರು : ಶ್ರೀ.ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 31.03.2020
4. ಉತ್ತರಿಸುವ ಸಚಿವರು : ಸಹಕಾರ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ	ರೈತರಿಗೆ ಬೆಂಬಲ ಬೆಲೆ ನೀಡಲು ಮೀಸಲಿಟ್ಟಿರುವ ನಿಧಿಯ ಮೊತ್ತವೆಷ್ಟು; ಈ ನಿಧಿಯನ್ನು ಯಾವ ಯಾವ ಉದ್ದೇಶಗಳಿಗಾಗಿ ಬಳಸಲಾಗಿದೆ;	ಸರ್ಕಾರವು ರೈತರು ಬೆಳೆದ ಕೃಷಿ ಉತ್ಪನ್ನಗಳ ಧಾರಣೆ ಕುಸಿತದ ಸಂದರ್ಭದಲ್ಲಿ ರೈತರ ನೆರವಿಗಾಗಿ ಈ ಕೆಳಕಂಡ ಯೋಜನೆಗಳನ್ನು ಜಾರಿಗೊಳಿಸುತ್ತಿದ್ದು ಈ ಉದ್ದೇಶಕ್ಕೆ ಆವರ್ತ ನಿಧಿಯನ್ನು ಸ್ಥಾಪಿಸಿದೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಆಕರಿಸುವ ಮಾರುಕಟ್ಟೆ ಶುಲ್ಕ ಶೇಕಡಾ 1.5ರ ದರದಲ್ಲಿ ನಲವತ್ತು ಪೈಸೆಯನ್ನು ಪ್ರತಿ ತಿಂಗಳು ಆವರ್ತ ನಿಧಿಗೆ ಪಾವತಿಸುತ್ತವೆ. ಸರ್ಕಾರವು ಅಗತ್ಯಕ್ಕೆ ಅನುಗುಣವಾಗಿ ಯೋಜನೆ ಜಾರಿಗೆ ಬೇಕಾಗುವ ಹಣವನ್ನು ಬಿಡುಗಡೆಗೊಳಿಸುತ್ತದೆ. 1. ಫ್ಲೋರ್ ಪ್ರೈಸ್ ಯೋಜನೆ ಹಾಗೂ 2. ಬೆಂಬಲ ಬೆಲೆ ಯೋಜನೆಯ ಅನುಷ್ಠಾನಕ್ಕೆ ಮೀಸಲಿರಿಸಲಾಗಿದೆ. ಆವರ್ತ ನಿಧಿಯ ಬಳಕೆಯ ಸಂಬಂಧ ಇರುವ ಮಾರುಕಟ್ಟೆ ಕಾಯ್ದೆಯಲ್ಲಿನ ನಿರೂಪಣೆ ಮೇರೆಗೆ ಸರ್ಕಾರವು ಕೈಗೊಳ್ಳುವ ನಿರ್ಣಯದಂತೆ ಆವರ್ತ ನಿಧಿ ಉಪಯೋಗಿಸಲಾಗುತ್ತಿದೆ.
ಆ	ಕೃಷಿ ಮಾರಾಟ ಮಂಡಳಿಯ ಬಳಿ ಇದ್ದ ಆವರ್ತನಿಧಿಯಲ್ಲಿ ಎಷ್ಟು ಮೊತ್ತವನ್ನು ಬ್ಯಾಂಕಿನಲ್ಲಿ ಡಿಪಾಸಿಟ್ ಇಡಲಾಗಿದೆ. ಯಾವ ಯಾವ ಬ್ಯಾಂಕಿನಲ್ಲಿ ಡಿಪಾಸಿಟ್ ಇಡಲಾಗಿದೆ; ಬ್ಯಾಂಕಿನಲ್ಲಿ ಡಿಪಾಸಿಟ್ ಇಡಲು ಇರುವ ನಿಯಮಗಳೇನು;	ಆವರ್ತ ನಿಧಿಗೆ ಸಂಬಂಧಿಸಿದಂತೆ ವಿವಿಧ ಬ್ಯಾಂಕಿನಲ್ಲಿ ಠೇವಣಿ ಇಡಲಾದ ಮೊತ್ತದ ವಿವರವನ್ನು ಅನುಬಂಧದಲ್ಲಿ ಸಲ್ಲಿಸಿದೆ. ಆವರ್ತ ನಿಧಿಯಲ್ಲಿನ ಹೆಚ್ಚುವರಿ ಮೊತ್ತವನ್ನು (surplus fund) ಠೇವಣಿ ಇಡುವಾಗ ವಿವಿಧ ರಾಷ್ಟ್ರೀಕೃತ ಬ್ಯಾಂಕುಗಳಿಂದ ಗರಿಷ್ಠ ಬಡ್ಡಿ ದರ ನೀಡುವ ಬಗ್ಗೆ quotation ಪಡೆದು ಠೇವಣಿ ಇಡಲಾಗಿರುತ್ತದೆ.
ಇ	ಬ್ಯಾಂಕಿನಲ್ಲಿ ಡಿಪಾಸಿಟ್ ಇಟ್ಟಾಗ ಬಂದಿರುವ ಬಡ್ಡಿಯ ಮೊತ್ತವೆಷ್ಟು; ಈ ಬಡ್ಡಿಯನ್ನು ಯಾವ ರೀತಿಯಲ್ಲಿ ವೆಚ್ಚ ಮಾಡಲಾಗಿದೆ;	ಬ್ಯಾಂಕಿನಲ್ಲಿ ಠೇವಣಿ ಇಟ್ಟಾಗ ಬರುವ ಬಡ್ಡಿ ಮೊತ್ತವನ್ನು ಆವರ್ತನಿಧಿ ಖಾತೆಯಲ್ಲಿಯೇ ಸೇರ್ಪಡೆಗೊಳಿಸಿ, ಯೋಜನೆಯ ಅನುಷ್ಠಾನಕ್ಕೆ ವಿನಿಯೋಗಿಸಲಾಗುವುದು.
ಈ	ಕೃಷಿ ಮಾರಾಟ ಮಂಡಳಿಯ ಆವರ್ತ ನಿಧಿಯಲ್ಲಿ 100 ಕೋಟಿಗಳ ಅವ್ಯವಹಾರವಾಗಿರುವುದು ಸರ್ಕಾರದ	ಕೃಷಿ ಮಾರಾಟ ಮಂಡಳಿಯಲ್ಲಿ ಯಾವುದೇ ಹಗರಣ ಆಗಿರುವುದಿಲ್ಲ. ಆದರೆ ಸಿಂಡಿಕೇಟ್ ಬ್ಯಾಂಕ್, ಉತ್ತರಹಳ್ಳಿ ಶಾಖೆ, ಬೆಂಗಳೂರು ಇಲ್ಲಿ ನಿಶ್ಚಿತ ಠೇವಣಿಯ

	ಗಮನಕ್ಕೆ ಬಂದಿದೆಯೇ; ಅವ್ಯವಹಾರ ನಡೆಸಿದ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?	ರೂಪದಲ್ಲಿ ಇಟ್ಟಿದ್ದ ಮಂಡಳಿಯ ರೂ.100.00 ಕೋಟಿ ಪೈಕಿ ರೂ.48.00 ಕೋಟಿ ಹಣ ವಂಚನೆಗೆ ಒಳಗಾಗಿರುತ್ತದೆ ಬ್ಯಾಂಕಿನ ಶಾಖೆಯಲ್ಲಿ ವಂಚನೆ ನಡೆದಿರುವುದು ಗಮನಿಸಿ, ಸಿಂಡಿಕೇಟ್ ಬ್ಯಾಂಕ್, ಉತ್ತರಹಳ್ಳಿ ಶಾಖೆ ಇದರ ವ್ಯವಸ್ಥಾಪಕರು ಹಾಗೂ ಇತರರ ವಿರುದ್ಧ ಕೃಷಿ ಮಾರಾಟ ನಿರ್ದೇಶಕರು ಹಾಗೂ ಕೃಷಿ ಮಾರಾಟ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರು, ಕೂಡಲೇ ಕಮರ್ಷಿಯಲ್ ಸ್ಟ್ರೀಟ್ ಪೋಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನ ವರದಿ ಸಂಖ್ಯೆ:10/2020 ದಾಖಲಿಸಲಾಗಿದೆ. ಪ್ರಸ್ತುತ ವಂಚನೆ ಪ್ರಕರಣವು ಕೇಂದ್ರೀಯ ಅಪರಾಧ ಘಟಕಕ್ಕೆ (ಸಿ.ಸಿ.ಬಿ) ವರ್ಗಾವಣೆಯಾಗಿದ್ದು, ತನಿಖೆ ತೀವ್ರ ಪ್ರಗತಿಯಲ್ಲಿದೆ. ಕೃಷಿ ಮಾರಾಟ ಮಂಡಳಿಯ ಡಾ॥ರತ್ನಮ್ಮ, ಮುಖ್ಯ ಪ್ರಧಾನ ವ್ಯವಸ್ಥಾಪಕರು (ಪ್ರಭಾರ), ಡಾ॥ಸಿದ್ಧಗಂಗಯ್ಯ, ಉಪ ಪ್ರಧಾನ ವ್ಯವಸ್ಥಾಪಕರು ಹಾಗೂ ಶ್ರೀ ಅಮ್ಜದ್ ಉಲ್ಲಾ ಖಾನ್, ಕಿರಿಯ ಸಹಾಯಕರು ಇವರನ್ನು ಸರ್ಕಾರದ ನಿರ್ದೇಶನದ ಮೇರೆಗೆ ದಿ:03.02.2020 ರಿಂದ ಅನ್ವಯಿಸುವಂತೆ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು. ಡಾ॥ರತ್ನಮ್ಮ ಇವರನ್ನು ಸೇವೆಯಲ್ಲಿ ಪುನರ್‌ಸ್ಥಾಪಿಸಲಾಗಿದೆ. ಪ್ರಸ್ತುತ ವಯೋನಿವೃತ್ತಿ ಹೊಂದಿರುತ್ತಾರೆ. ಶ್ರೀ ಅಮ್ಜದ್ ಉಲ್ಲಾ ಖಾನ್ ಇವರನ್ನು ಸೇವೆಯಲ್ಲಿ ಪುನರ್ ಸ್ಥಾಪಿಸಲಾಗಿರುತ್ತದೆ. ಡಾ॥ ಸಿದ್ಧಗಂಗಯ್ಯ, ಉಪ ಪ್ರಧಾನ ವ್ಯವಸ್ಥಾಪಕರನ್ನು ದಿ:16.05.2020ರಂದು ಅಭಿಯೋಜನೆಗೊಳಿಸಲು ಮಂಜೂರಾತಿ ನೀಡಲಾಗಿದೆ. ಸಿಂಡಿಕೇಟ್ ಬ್ಯಾಂಕಿನ ಆಡಳಿತ ಮಂಡಳಿಯೊಂದಿಗೆ ನಿಶ್ಚಿತ ಠೇವಣಿ ಬಾಬ್ತು ಪೂರ್ಣ ಮರುಪಾವತಿ ಮಾಡಲು ನಿರಂತರವಾಗಿ ಕ್ರಮ ಕೈಗೊಳ್ಳಲಾಗಿ, ಠೇವಣಿ ಇಡಲಾಗಿದ್ದ ರೂ.100.00 ಕೋಟಿ ಮೊತ್ತವು ಬಡ್ಡಿ ಸಮೇತವಾಗಿ ಕೃಷಿ ಮಾರಾಟ ಮಂಡಳಿಗೆ ಹಿಂದಿರುಗಿ ಬಂದಿರುತ್ತದೆ. ಅದರನ್ವಯ, ಕೃಷಿ ಮಾರಾಟ ಮಂಡಳಿಗೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ.

ಸಂಖ್ಯೆ: ಸಇ 173 ಎಂಆರ್‌ಇ 2020

ಎಸ್.ಟಿ. ಸೋಮಶೇಖರ್

(ಎಸ್.ಟಿ. ಸೋಮಶೇಖರ್)

ಸಹಕಾರ ಸಚಿವರು

(13)

Annexure -1

Bank account details regarding Revolving fund (as on 30-4-2020)			
Sl.No	**Name of the Bank**	**Nature of account**	**Amount Invested (In Rs.)**
1	Andhra Bank, Rajaji Nagar	Flexi Deposit	1853282584
2	Andhra Bank, Rajaji Nagar	Saving Account	968092912
3	Apex Bank, Jayanagar Market Complex Branch	Fixed Deposit	30000000
4	Apex Bank, Rajaji Nagar Branch	Fixed Deposit	50000000
5	Apex Bank, Shivaji Nagar Branch	Fixed Deposit	32011365
6	Apex Bank, MS Building Branch	Fixed Deposit	32011365
7	Apex Bank, Vivekananda College Extension Branch	Fixed Deposit	32011365
8	Bank of India, Visveswarapuram	Fixed Deposit	1000000000
Grand Total			**3997409591**

(Karee Gowda)
Managing Director